Vijayavani 30th June 2015

RVCE Student represented world university games

## ಗಂಭೀರ್‌ಗೆ ಲ್ಯಾಂಗರ್ ಕೋಚ್



**ನವದೆಹಲಿ:** ಮತ್ತೆ ಭಾರತ ತಂಡಕ್ಕೆ ಸೇರ್ಪಡೆಗೊಳ್ಳುವ ತವಕದಲ್ಲಿರುವ ಅನುಭವಿ ಬ್ಯಾಟ್ಸ್‌ಮನ್ ಗೌತಮ್ ಗಂಭೀರ್ ಆಸ್ಟ್ರೇಲಿಯಾದ ಶ್ರೇಷ್ಠ ಟೆಸ್ಟ್ ಬ್ಯಾಟ್ಸ್‌ಮನ್ ಜಸ್ಟಿನ್ ಲ್ಯಾಂಗರ್ ಅವರಿಂದ ಪರ್ತ್‌ನಲ್ಲಿ ಮಾರ್ಗದರ್ಶನ ಪಡೆಯುತ್ತಿದ್ದು, ಬ್ಯಾಟಿಂಗ್ ಸುಧಾರಣೆಯತ್ತ ಗಮನ ಹರಿಸಿದ್ದಾರೆ.

## ಮಣಿಕಂದನ್‌ಗೆ ಚಿನ್ನ



**ಬೆಂಗಳೂರು:** ಆಸ್ಟ್ರಿಯಾದಲ್ಲಿ ನಡೆಯುತ್ತಿರುವ ಐಎಫ್‌ಎಸ್‌ಸಿ ಪ್ಯಾರಾ ಕ್ಲೈಂಬಿಂಗ್ ಕಪ್‌ನಲ್ಲಿ ಕರ್ನಾಟಕದ ಮಣಿಕಂದನ್ ಚಿನ್ನದ ಪದಕ ಜಯಿಸಿದ್ದಾರೆ. ಜುಲೈ 10ರಂದು ಆರಂಭಗೊಳ್ಳಲಿರುವ ಚಾಮೊನಿಕ್ಸ್ ಸ್ಪರ್ಧೆಗಳಲ್ಲೂ ಸ್ಪರ್ಧಿಸುತ್ತಿದ್ದಾರೆ. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

## ವಿಶ್ವ ವಿವಿ ಗೇಮ್ಸ್‌ಗೆ ಅರವಿಂದ್



**ಬೆಂಗಳೂರು:** ಉದಯೋನ್ಮುಖ ಈಜುಗಾರ ಅರವಿಂದ್ ಎಂ. ದಕ್ಷಿಣ ಕೊರಿಯಾದ ಗವಾಂಗ್ಜುವಿನಲ್ಲಿ ಜುಲೈ 3ರಿಂದ 14ರವರೆಗೆ ನಡೆಯಲಿರುವ ವಿಶ್ವ ವಿವಿ ಗೇಮ್ಸ್‌ನಲ್ಲಿ ಭಾರತ ತಂಡ ಪ್ರತಿನಿಧಿಸಲಿದ್ದಾರೆ. ಅರವಿಂದ್, ಆರ್.ವಿ. ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾರೆ.

Vijayavani - 30.06.2015.